## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ

ಅಸಲು ದಾವೆ ನಂ.**479/21** ದಿನಾಂಕಃ **11.09.2024.**

ಪಿ.ಡಬ್ಲೂಃ**-2**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣಕರಿಸಲಾಯಿತು :**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. RLP ರವರಿಂದಃ-**

ನಾನು ಬಿ ಎ ಪದವೀದರ . ನಾನು ವಾದಿಯ ಬ್ಯಾಂಕನಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಮತ್ತು ಇಂಗ್ಲಿಷ ಓದು ಬರಹ ಗೊತ್ತು. ನಾನು ಸುಮಾರು 2 ರಿಂದ 3 ಕರಾರುಪತ್ರಗಳಿಗೆ ಸಾಕ್ಷಿ ಆಗಿ ಸಹಿ ಮಾಡಿರುತ್ತೇನೆ . ಸದರಿ ಕರಾರುಪತ್ರಗಳು ವಾದಿಗೆ ಸಂಬಂದಪಟ್ಟಿದ್ದಲ್ಲ. ಸದರಿ ಕರಾರುಪತ್ರಗಳಿಗೆ ಯಾವ ದಿನಾಂಕ ಸಹಿ ಮಾಡಿದ್ದೇನೆ ಎಂದು ಹೇಳಲಾಗುವುದಿಲ್ಲ. ನನ್ನ ಜಮೀನಿನ ಸ ನಂ 1350/1 ವಿಸ್ತೀರ್ಣ 3 ಎ 35 ಗುಂಟೆ ಆಕಾರ ಗೊತ್ತಿಲ್ಲ. ದಾವಾಸ್ವತ್ತಿನ ಆಕಾರ ಹೇಳಲಾಗುವುದಿಲ್ಲ. ನಾನು ದಾವಾ ಆಸ್ತಿ ಬಳಿ 2 ಬಾರಿ ಹೋಗಿದ್ದೇನೆ. ವಾದಿ , ವೈ ಆರ ಪೂಜಾರ ಮತ್ತು ಎಂ ಬಿ ಹೊನಗೌಡ ಎಂಬುವರೊಂದಿಗೆ ಹೋಗಿರುತ್ತೇನೆ. ಈ ರೀತಿ ದಾವಾ ಆಸ್ತಿಗೆ ಬೇಟಿ ನೀಡಿದ ದಿನಾಂಕ ಹೇಳಲಾಗುವುದಿಲ್ಲ. ಅದೇರೀತಿ 2 ನೇ ಬಾರಿ ಎಷ್ಟು ದಿನಗಳ ನಂತರ ಹೋಗಿದ್ದೆ ಎಂದು ಹೇಳಲಾಗುವುದಿಲ್ಲ . ಹಗಲು ಸಹ ಮೇಲ್ಕಂಡವರೊಂದಿಗೆ ದಾವಾ ಆಸ್ತಿಗೆ ಬೇಟಿ ನೀಡಿದ್ದೆ . ದಾವಾ ಆಸ್ತಿ ಉತ್ತರ ದಕ್ಷಿಣಾಭಿಮುಖವಾಗಿದೆ. ದಾವಾ ಆಸ್ತಿಯ ದಕ್ಷಿಣಕ್ಕೆ ಪುತಳಾಬಾಯಿ ಎಂಬುವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಮಾಹಿತಿ ಇಲ್ಲ. ಆ ಕುರಿತು ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿಲ್ಲ . ಪ್ರತಿವಾದಿಗೆ ದಾವಾ ಆಸ್ತಿ ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ , ಅದೇರೀತಿ ಅವರ ಕುಟುಂಬದ ಸದಸ್ಯರ ಬಗ್ಗೆ ಮಾಹಿತಿ ಇಲ್ಲ. ಕರಾರಿನ ವ್ಯವಹಾರ ದಾವಾ ಸ್ವತ್ತಿನಲ್ಲೇ ನಡೆದಿರುತ್ತದೆ.

ಆ ಸಂದರ್ಬದಲ್ಲಿ ವಾದಿ, ಪ್ರತಿವಾದಿ, ನಾನು, ವೈ ಆರ ಪೂಜಾರಿ ಮತ್ತು ಹೊನಗೌಡ ಎಂಬುವರು ಇದ್ದೆವು. ಇವರನ್ನು ಹೊರತುಪಡಿಸಿ ಬೇರೆ ಯಾರಿದ್ದರು ಎಂದು ಈಗ ನೆನಪಿಲ್ಲ. ಅಂತಹ ಯಾವುದೇ ವ್ಯವಹಾರ ನಡೆಯದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ಎಮ ಬಿ ಹುಚ್ಚಗೌಡರ ಪೂರ್ಣ ಹೆಸರು ಹೇಳಲಾಗುವುದಿಲ್ಲ. ವಾದಿ ಹಲವು ಖಾಲಿ ಪತ್ರಗಳಿಗೆ ಸಹಿ ಪಡೆದು ಕರಾರುಪತ್ರಗಳನ್ನು ಸೃಷ್ಟಿ ಮಾಡುವ ಹವ್ಯಾಸ ಇದ್ದು ಅವುಗಳಿಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ಅದೇರೀತಿ ಇನ್ನೂ ಕೆಲವು ಪ್ರಕರಣಗಳಲ್ಲಿ ನಾನು ವಾದಿ ಪರವಾಗಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕರಾರುಪತ್ರ ಕ್ಕೆ ಕರಾರುಪತ್ರ ಬರೆದುಕೊಡುವವರ ಮತ್ತು ಬರೆಸಿಕೊಳ್ಳುವವರ ಪೋಟೋ ಹಚ್ಚಲಾಗುತ್ತದೆ ಎಂದರೆ ಸರಿ . ಅದೇರೀತಿ ಸದರಿ ಪೋಟೋಗಳ ಮೇಲೆ ಉಭಯ ಪಕ್ಷಗಾರರ ಸಹಿ ಪಡೆಯಲಾಗುತ್ತದೆ ಎಂದರೆ ಸರಿ . ಖಾಲಿಪತ್ರದ ಮೇಲೆ ಪ್ರತಿವಾದಿ ಪೋಟೋ ಅಂಟಿಸಿ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಕರಾರುಪತ್ರಕ್ಕೆ ಪ್ರತಿವಾದಿ , ವೈ ಆರ ಪೂಜರಿ ಮತ್ತು ನಾನು ಸಹಿ ಮಾಡಿದ್ದು ಅಲ್ಲದೇ ಪತ್ರಬರಹಗಾರರು ಸಹಿ ಮಾಡಿರುತ್ತಾರೆ. ಇವರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆಂದು ನನಗೆ ನೆನಪಿಲ್ಲ . ಸದರಿ ಪತ್ರ ಬರೆದನಂತರ ನಾನು ಯಾವತ್ತೂ ಅದನ್ನು ನೋಡಿಲ್ಲ . ವಾದಿಗೆ ಪ್ರತಿವಾದಿ ಜಮೀನು ಮಾರಾಟ ಮಾಡುವುದಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯನ್ನು ಈ ಕರಾರು ಮಾಡಿಕೊಡುವ ಪೂರ್ವದಲ್ಲಿ ಮತ್ತೆ ಕರಾರು ಮಾಡಿದ ನಂತರ ಒಂದೆರಡು ಬಾರಿ ಬೇಟಿ ಮಾಡಿದ್ದೇನೆ . ಈ ರೀತಿ ಬೇಟಿ ಮಾಡಿದ ನಿಗದಿತ ದಿನಾಂಕ ಮತ್ತು ಸಮಯ ಹೇಳಲಾಗುವುದಿಲ್ಲ. ಎಮ ಬಿ ಹುಚ್ಚೇಗೌಡರ ಪರಿಚಯ ಇದೆ ಎಂದರೆ ಸರಿ . ಸದರಿಯವರು ಮತ್ತು ವಾದಿಯರ ನಡುವೆ ಸಾಕಷ್ಟು ವ್ಯವಹಾರಗಳಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಮ ಬಿ ಹುಚ್ಚೇಗೌಡರು ವಾದಿಯಿಂದ ಕೈಸಾಲವಾಗಿ ಹಣ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ವ್ಯವಹಾರಕ್ಕೆ ಸಂಬಂದಪಟ್ಟಂತೆ ಒಂದು ಚೆಕ್ಕನ್ನು ನೀಡಿದ್ದು ವಾದಿಯು ಚೆಕ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ

ರೂ.60000/- ಪಡೆದಿದ್ದು ರೂ .40000/-ಗಳಿಗೆ ಒಂದು ಚೆಕ್ಕನ್ನು ಮತ್ತು ಇನ್ನುಳಿದ ರೂ.20000/-ಗಳ ಕುರಿತು ಖಾಲಿಪತ್ರಕ್ಕೆ ಪ್ರತಿವಾದಿಯ ಸಹಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಹಣದ ಆದಾರಕ್ಕಾಗಿ ಖಾಲಿಪತ್ರಕ್ಕೆ ಸಹಿ ಪಡೆದು ಅದನ್ನು ಖೊಟ್ಟಿ ಕರಾರುಪತ್ರವಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಕರಾರು ಸಂದರ್ಬದಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಉತಾರನ್ನು ನೋಡಿರುತ್ತೇನೆ . ಅದನ್ನು ಹಾಜರುಪಡಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅದೇರೀತಿ ವಾದಿ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿ ಮಾತು ಕೇಳಿ ಹಾಗೂ ನಾನು ವಾದಿಯ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವ ಕಾರಣ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ವಾದಿಯ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ